ಈ ದಿನ ದಿನಾಂಕಃ 19-11-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ನಾನು 8ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನನ್ನ ಮದುವೆ 18ವರ್ಷದವಳಿದ್ದಾಗ ಆಗಿದ್ದು ಈಗ ನನಗೆ 40ವರ್ಷ ವಯಸ್ಸಾಗಿದೆ ಅಲ್ಲಿಂದಲೂ ನಾನು ಗಂಡನ ಮನೆಯಲ್ಲಿ ವಾಸವಿದ್ದೇನೆ. ಪ್ರತಿವಾದಿಗಳು ನನ್ನ ಮಾವಂದಿರು. ಅವರು ನನ್ನ ಗಂಡನ ಸಹೋದರರು. ನನ್ನ ಗಂಡ 9 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಗಂಡ ಜೀವಂತ ಅವರು ಮತ್ತು ಪ್ರತಿವಾದಿಗಳ ಮದ್ಯ 2000ನೇ ಸಾಲಿನಲ್ಲಿ ವಿಬಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಕಳೆದ 9 ವರ್ಷಗಳಿಂದ ನಾನು ತವರು ಮನೆಯಲ್ಲಿದ್ದೇನೆ ಎಂದು ಸಾಕ್ಷಿ ನುಡಿದು ನಂತರ 2-3 ತಿಂಗಳು ಎಂದು ನುಡಿಯುತ್ತಾರೆ. ನಮ್ಮ ತವರು ಮನೆ ಊರು ಕುಣೆಕಟ್ಟೆ ಹೊಳಲ್ಕೆರೆ ತಾಲ್ಲೂಕಿನಲ್ಲಿದೆ. ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಗಂಡನ ಮನೆ ವಿಳಾಸವನ್ನು ವಾಸ ಸ್ದಳವಾಗಿ ತೋರಿಸಿದ್ದೇನೆ.

2. ನನ್ನ ಗಂಡ ಸತ್ತ ನಂತರ 2-3 ತಿಂಗಳುಗಳ ಕಾಲ ಗಂಡನ ಮನೆಯಲ್ಲಿದ್ದೆ. ಗಂಡ ಸತ್ತ ನಂತರ 4ವರ್ಷಗಳ ಹಿಂದೆ ನಾನು ಗಂಡನ ಮನೆಯಲ್ಲಿದ್ದೆ. ನಂತರ ತವರು ಮನೆಯಲ್ಲಿ ವಾಸವಿದ್ದೇನೆ. ನಿಪಿ1 ರ ಕಾಲಕ್ಕೆ ನಾನು ಹೊಳಲ್ಕೆರೆ ತಾಲ್ಲೂಕಿನಲ್ಲಿ ವಾಸವಿದ್ದೆನು. ಈ ಪ್ರಕರಣಕ್ಕಾಗಿ ನಾನು ಅದರಲ್ಲಿ ಮಹಾದೇವ ಪುರ ವಿಳಾಸ ತೋರಿಸಿದ್ದೇನೆ ಎಂದರೆ ಸರಿ. ಮುಖ್ಯ ವಿಚಾರಣ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತಿಲ್ಲ ಅದನ್ನು ಯಾರು ಬರೆದಿದ್ದಾರೆಂದು ಗೊತ್ತಿಲ್ಲ.

3. ದಾವಾ ಆಸ್ತಿಯಲ್ಲಿ ನನಗೆ ಅರ್ದ ಹಿಸ್ಸಾ ಇದೆ ಎಂದು ದಾವೆ ಸಲ್ಲಿಸಿದ್ದೇನೆ. ಸದರಿ ಆಸ್ತಿಗಳಲ್ಲಿ ನಮ್ಮ ಅಜ್ಜ ಅಜ್ಜಿಗೆ ಅರ್ದ ಹಿಸ್ಸೆ ಬರಬೇಕೆಂದು ನನಗೆ ಹೇಳಿದ್ದರು ಆದರೆ ಯಾವ ಸರ್ವೆ ನಂಬರ್ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ ಚೆಕ್ಕುಬಂದಿ ನನಗೆ ಗೊತ್ತಿಲ್ಲ. 2000

ಇಸವಿಯಿಂದಲೂ ಪ್ರತಿವಾದಿಗಳು ತಮ್ಮ ತಮ್ಮ ಆಸ್ತಿ ಪ್ರತ್ಯೇಕವಾಗಿ ಅನುಬೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಈ ವಿಚಾರವನ್ನು ವಾದ ಪತ್ರದಲ್ಲಿ ಉಲ್ಲೇಖ ಮಾಡಿಲ್ಲ.

4. ದಾವಾ ಆಸ್ತಿಗಳಲ್ಲಿ ಸಾಲವಿದ್ದು ಅದು ಪಹಣಿಯಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಸುಳ್ಳಾಗಿ ಬರೆಸಿಕೊಂಡಿದ್ದಾರೆಂದು ನುಡಿಯುತತಾರೆ. ಎಲ್ಲೆಲ್ಲಿ ಸಾಲ ಪಡೆದಿದ್ದಾರೆಂದು ನನಗೆ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು. ಪಹಣಿಗಳಲ್ಲಿ ಸಾಲದ ವಿವರ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಖಾಸಗಿ ವ್ಯಕ್ತಿಗಳಿಂದ 3 ಲಕ್ಷ, ಇಂಡಿಯನ್ ಬ್ಯಾಂಕ್ ನಿಂದ ಸಾಲ ಪಡೆದಿದ್ದಾರೆಂದರೆ ಗೊತ್ತಿಲ್ಲ. ದಾವಾ 4ನೇ ಸ್ವತ್ತಿನಲ್ಲಿ 3 ಮನೆಗಳಿದ್ದು ಅವುಗಳನ್ನು ಕಟ್ಟಲು ಸಾಲ ಪಡೆದ ವಿಚಾರ ಗೊತ್ತಿಲ್ಲ.

5. ದಾವಾ 3ನೇ ಸ್ವತ್ತಿನಲ್ಲಿ ನನ್ನ ಗಂಡನೇ 12ವರ್ಷಗಳ ಹಿಂದೆ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 12ವರ್ಷದ ಅವದಿಗೆ ಆದಾರವಾಗಿ ಕೊಡಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯ ಸಾಲದ ಮೊತ್ತನ್ನು ನನ್ನ ಗಂಡ ತೀರಿಸಲಾಗದ ಕಾರಣಕ್ಕಾಗಿ ಆತನ ಹಿಸ್ಸೆಯನ್ನು ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿದ್ದರಿಂದ ಪ್ರತಿವಾದಿಗಳು ಆತನ ಸಾಲವನ್ನು ತೀರಿಸಿ ಸಾಗುವಳಿ ಮಾಡುತ್ತಿದ್ದಾರೆಂದರೆ ಗೊತ್ತಿಲ್ಲ. ಪ್ರತಿವಾದಿಗಳ ತಕರಾರನ್ನು ತಿಳಿದುಕೊಂಡಿಲ್ಲ ನನ್ನ ಗಂಡ 1,75,000/- ರೂ ಸಾಲವನ್ನು ಮರುಪಾವತಿಸಲಿಲ್ಲ ಎಂದರೆ ಗೊತ್ತಿಲ್ಲ. ಅವರ ಪಾಲಿಗೆ ಬಂದ ತೋಟ ನೀರಿ ಕೊರತೆಯಿಂದ ಮತ್ತು ನಿರ್ವಹಣೆ ಮಾಡದೆ ಇದ್ದುದರಿಂದ ಹಾಳಾಗಿ ಹೋಯಿತು ಎಂದರೆ ಸರಿ. ಈ ವಿಚಾರವನ್ನು ನಾನು ವಾದ ಪತ್ರದಲ್ಲಿ ಉಲ್ಲೇಖಿಸಿದ್ದೇನೆ.

6. ಸದರಿ ಜಮೀನಿನ ಕುರಿತಾಗಿ ತೋಟ ಮಾಡಲು ಗೊಪ್ಪೇನಹಳ್ಳಿ ಗ್ರಾಮದ ಇಂಡಿಯನ್ ಬ್ಯಾಂಕ್ ನಲ್ಲಿ ನನ್ನ ಗಂಡ 5,57,608/- ರೂ ಸಾಲದ ಮೊತ್ತ ಬಾಕಿಯಿದೆ ಎಂದರೆ ಗೊತ್ತಿಲ್ಲ. ಸದರಿ ನನ್ನ ಗಂಡನ ಪಾಲಿಗೆ ಬಂದ ಆಸ್ತಿ ಮತ್ತು ಸಾಲದ ಮೊತ್ತವನ್ನು ಪಡೆದುಕೊಳ್ಳುವಂತೆ ಪ್ರತಿವಾದಿಗಳು ನಮಗೆ ಹೇಳಿದದರು ಎಂದರೆ ಸರಿ. ಆ ವಿಚಾರದನ್ವಯ ನಡೆದುಕೊಳ್ಳದೆ ನಾನು ಮಾವನವರ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೆ ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿಯೂ

ಸಹ ಅದೇ ವಿಚಾರವಾಗಿ ಮಾತುಕತೆಯಾಗಿತ್ತು ಎಂದರೆ ಸರಿ. ಅಲ್ಲಿ ಹಣಕಟ್ಟಲು ನಾನು ಒಪ್ಪಿಕೊಂಡ ವಿಚಾರವನ್ನೂ ಮರೆಮಾಚಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಅವರು ಮೋಸ



ಮಾಡಿದ್ದಾರೆಂದು ನುಡಿಯುತ್ತಾರೆ. ಈ ಹಿಂದೆ ನಡೆದ ಮೇಲಿನ ಸಂಗತಿಗಳನ್ನು ವಾದ ಪತ್ರದಲ್ಲಿ ಉಲ್ಲೇಖಿಸಿರುವುದಿಲ್ಲ.

7. ಪ್ರತಿವಾದಿಗಳು 5,57,608/- ರೂ ಸಾಲವನ್ನು ಮರುಪಾವತಿಸಿ ನನ್ನ 1/3ನೇ ಬಾಗವನ್ನು ಪಡೆಯುವಂತೆ ಪ್ರತಿವಾದ ಮಾಡಿದ್ದಾರೆಂದರೆ ಸರಿ. ಈ ವಿಚಾರವನ್ನು ನಾನು ವಕೀಲರಿಗೆ ಹೇಳಿ ವಾದ ಪತ್ರದಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಕಂಚುಗಾರನಹಳ್ಳಿ ಗ್ರಾಮದ ಸರ್ವೆ ನಂ. 12/1ರಲ್ಲಿನ 1 ಎಕರೆ 2 ಗುಂಟೆ ಪೈಕಿ 20 ಗುಂಟೆ ಜಮೀನನ್ನು ನನ್ನ ಗಂಡ ಮಾರಾಟ ಮಾಡಿದ ವಿಚಾರ ಗೊತ್ತಿಲ್ಲ ಆದರೆ ವಿಚಾರವನ್ನು ವಕೀಲರಿಗೆ ತಿಳಿಸಿ ವಾದ ಪತ್ರದಲ್ಲಿ ಉಲ್ಲೇಖಿಸಿಲ್ಲ.

8. ನನ್ನ ಅತ್ತೆಗೆ ಕ್ಯಾನ್ಸರ್ ರೋಗದಿಂದ ಮರಣ ಹೊಂದಿದ್ದಾರೆ. ಅದೇ ರೀತಿ ನನ್ನ ಮಾವ ಗ್ಯಾಂಗ್ರೀನ್ ರೋಗದಿಂದ ಮೃತಪಟ್ಟಿರುತ್ತಾರೆ. ಅವರ ಚಿಕಿತ್ಸೆಗಾಗಿ 8 ರಿಂದ 10ಲಕ್ಷ ರೂ ಖರ್ಚಾಗಿದೆ ಎಂದರೆ ಸರಿ. ನನ್ನ ಗಂಡ ಅವರ ತಂದೆ ತಾಯಿ ಮರಣ ಹೊಂದುವ ಪೂರ್ವದಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅತ್ತೆ ಮಾವ ಯಾವ ಅವದಿಯಲ್ಲಿ ಆಸ್ಪತ್ರೆಯಲ್ಲಿದ್ದರು ಎಂದು ಗೊತ್ತಿಲ್ಲ. ಅವರ ಜೊತೆ ಶುಶ್ರೂಷೆಗಾಗಿ ಆಸ್ಪತ್ರೆಯಲ್ಲಿ ಇರಲಿಲ್ಲ. ಅವರು ಆಸ್ಪತ್ರೆಯಿಂದ ಬಂದ ನಂತರ ನಾನು ಮನೆಗೆ ಹೊಗೀದ್ದೆ ಆದರೆ ವರ್ಷ ಗೊತ್ತಿಲ್ಲ. ಎಷ್ಟು ವರ್ಷಗಳ ಹಿಂದೆ ಎಂದು ಗೊತ್ತಿಲ್ಲ ಅದರೆ ನೋಡಿಕೊಂಡು ಬರಲು ಹೋಗಿದ್ದೆ.

9. ನನ್ನ ಗಂಡ ತನ್ನ ಜೀವಿತಾವದಿಯಲ್ಲಿ ಆತನ ಹಿಸ್ಸೆಗೆ ಬಂದ ಸರ್ವೆ ನಂ.15/4 ರಲ್ಲಿನ 1 ಎಕರೆ 11 ಗುಂಟೆ ಜಮೀನು ಬಿಟ್ಟುಕೊಟ್ಟಿದ್ದರಿಂದ, ಸರ್ವೆ ನಂ. 12/1ರಲ್ಲಿನ 20 ಗುಂಟೆ ಜಮೀನು ಮಾರಾಟ ಮಾಡಿದ್ದರಿಂದ ನನಗೆ ಹಿಸ್ಸೆ ಹಕ್ಕು ಉಳಿದಿಲ್ಲ ಎಂದರೆ ಗೊತ್ತಿಲ್ಲ. ನಮ್ಮ ಅತ್ತೆ ಮಾವನವರ ಚಿಕಿತ್ಸೆಗಾಗಿ ಮಾಡಿದ ಸಾಲ ಪ್ರತಿಯೊಬ್ಬರ ಹಿಸ್ಸೆಗೆ 5,57,608/- ರೂ ಸಾಲ ಬಾಕಿಯಿದೆ ಎಂದರೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಈ ವಿಚಾರ ಉಲ್ಲೇಖ ಮಾಡಿರುವುದು ನನಗೆ ಗೊತ್ತಿಲ್ಲ. ದಾವಾ

ಆಸ್ತಿಗಳಲ್ಲಿ ನಮಗೆ ಹಿಸ್ಸೆ ಹಕ್ಕು ಇರದಿದ್ದರೂ ಪ್ರತಿವಾದಿಗಳಿಗೆ ಸೇರಿದ ಹಿಸ್ಸೆಯಲ್ಲಿ ಹಕ್ಕನ್ನು ಕೋರಿ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.



10. ನನ್ನ ಗಂಡನ ಜೀವಿತಾವದಿಯಲ್ಲಿ, 2010ರಲ್ಲಾದ ಪಾಲು ವಿಬಾಗದಂತೆ ನನಗೆ ಪುನಃ ದಾವಾ ಆಸ್ತಿಯಲ್ಲಿ ಹಿಸ್ಸಾ ಹಕ್ಕು ಕೇಳಲು ಅಧಿಕಾರವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಆಗದವರ ಮಾತನ್ನು ಕೇಳಿ ಸುಳ್ಳು ದಾವೆ ದಾಖಲಿಸಿ ಸುಳ್ಳು ಹಕ್ಕು ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.